ಪಿ ಡಬ್ಲ್ಯೂಃ 1

**ದಿನಾಂಕಃ 06-08-2018 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ   ವಕೀಲರಿಂದಃ**

ದೂರನ್ನು ಸುಕೋ ಬ್ಯಾಂಕ ವತಿಯಿಂದ ನೀಡಿದ್ದೇನೆ. ಸದರಿ ಬ್ಯಾಂಕಿನಲ್ಲಿ 2007 ರಿಂದ ಇಲ್ಲಿಯವರೆಗೂ ಸಹಾ ನಾನು ಕ್ಲಸ್ಟರ ಮ್ಯಾನೇಜರ ಎಂದು ಕೆಲಸ ಮಾಡುತ್ತಿದ್ದೇನೆ. ದೂರನ್ನು ಸಲ್ಲಿಸುವಾಗ ಸದರಿ ಬ್ಯಾಂಕಿನಲ್ಲಿ ಮ್ಯಾನೇಜ ಎಂದು ಕೆಲಸ ಮಾಡುತ್ತಿದ್ದೆ. ದೂರನ್ನು ಸಲ್ಲಿಸಲು ಬ್ಯಾಂಕಿನವರು ನನಗೆ ಅಧಿಕಾರವನ್ನು ಕೊಟ್ಟಿದ್ದಾರೆ. ನಾನು ಬ್ಯಾಂಕಿನಲ್ಲಿ ಕೆಲಸ ಮಾಡುವುದಕ್ಕಿಂತ ಮುಂಚಿತವಾಗಿ ಟೀಚರ ಎಂದು ಕೆಲಸ ಮಾಡುತ್ತಿದ್ದೆ. ದಿನಾಂಕ 30-7-2012 ರಂದು ಆರೋಪಿತರ ವಿರುದ್ಧ ನಾನು ದೂರು ಸಲ್ಲಿಸಿದ್ದೇನೆ. 2010 ರಲ್ಲಿ ನಾನು ಆರೋಪಿತರನ್ನು ಭೇಟಿಯಾಗಿದ್ದೆ. ವರ್ದಮಾನ ಬ್ಯಾಂಕ ಸುಕೋ ಬ್ಯಾಂಕಿನಲ್ಲಿ ವಿಲೀನಗೊಂಡ ಎಲ್ಲಾ ಗ್ರಾಹಕರಿಗೆ ನೋಟೀಸನ್ನು ನೀಡಿದ್ದೇವೆ. ಅದೇ ರೀತಿ ಪತ್ರಿಕೆ ಪ್ರಕಟಣೆಯನ್ನು ಸಹಾ ಕೊಟ್ಟಿದ್ದೇವೆ. ಆರೋಪಿತರಿಗೆ ನೀಡಿದ ನೋಟೀಸ ಪ್ರತಿಯನ್ನು ಹಾಜರ ಪಡಿಸಿದ್ದೇನೆ. ಆರೋಪಿತರು ವರ್ದಮಾನ ಬ್ಯಾಂಕಿನಲ್ಲಿ ತೆಗದುಕೊಂಡ ಸಾಲದ ಬಗ್ಗೆ ಎಲ್ಲಾ ದಾಖಲಾತಿಗಳನ್ನು ನಾನು ನೋಡಿದ್ದೇನೆ ಮತ್ತು ಸದರಿ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದೇನೆ. ವರ್ದಮಾನ ಬ್ಯಾಂಕ ಸುಕೋ ಬ್ಯಾಂಕಿನಲ್ಲಿ ವಿಲೀನಗೊಂಡ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿದ್ದೇನೆ. ಆರೋಪಿತರು ಸುಕೋ ಬ್ಯಾಂಕಿನಲ್ಲಿ ಯಾವದೇ ವ್ಯವಹಾರಗಳನ್ನು ನಡೆಸಿಲ್ಲ.

ಆರೋಪಿತರು ವರ್ದಮಾನ ಬ್ಯಾಂಕಿನಲ್ಲಿ ತೆಗೆದುಕೊಂಡಂತಹ ಎಲ್ಲಾ ಸಾಲವನ್ನು ಸಹಾ ತೀರಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಪಡೆದುಕೊಂಡ ಸಾಲವನ್ನು ಕೊಟ್ಟ ನಂತರವೂ ಸಹಾ ಅದನ್ನು ಸಿಬ್ಬಂದಿಗಳು ಅವರ ಲೋನ ಖಾತೆಗೆ ಜಮಾ ಮಾಡಿರಲಿಲ್ಲ ಎಂದರೆ ಸರಿಯಲ್ಲ. ವರ್ದಮಾನ ಬ್ಯಾಂಕಿನದು ರಾಣೆಬೆನ್ನೂರಿನಲ್ಲಿ ಶಾಖೆ ಇತ್ತು ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ಎಲ್ಲಾ ಪ್ರಕರಣಗಳಲ್ಲಿ ಸಾಲವನ್ನು ತುಂಬದೇ ಇರುವವರ ಜೊತೆ ಸಾಲವನ್ನು ತೆಗೆದುಕೊಳ್ಳುವ ಸಮಯದಲ್ಲಿ ಜಾಮೀನು ನೀಡಿದವರನ್ನೂ ಸಹಾ ಆರೋಪಿಗಳನ್ನಾಗಿ ಮಾಡುತ್ತೇವೆ.

( ಈ ಹಂತದಲ್ಲಿ ನ್ಯಾಯಾಲಯದ ಮಧ್ಯಾಹ್ನದ ವಿರಾಮದ ಸಮಯವಾಗಿದ್ದರಿಂದ, ಪಾಟೀ ಸವಾಲನ್ನು ಮಧ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

(ಬಿ.ಜಿ.ಪ್ರಮೋದ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ.

ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.

**ದಿನಾಂಕಃ 06-08-2018 ರಂದು ಮಧ್ಯಾಹ್ನ 3-00 ಗಂಟೆಗೆ ಪುನಃ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

( ಈ ಹಂತದಲ್ಲಿ ವಕೀಲರು ಸಮಯ ಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

(ಬಿ.ಜಿ.ಪ್ರಮೋದ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.

ಓ ಹೇ ಕೇ ಸರಿ ಇದೆ.